

## ಕಲ್ಲಿನ ಬಸವ-ಮನುಷ್ಯಾಕೃತಿ

ಈ ಚಿತ್ರದಲ್ಲಿ ಕಾಣಿಸುತ್ತಿರುವ ದೃಶ್ಯ ವಿಶೇಷ ನಂದಿ ಮೂರ್ತಿಯದ್ದು. ಕಲ್ಲಿನಿಂದಾಗಿ ಈ ಮೂರ್ತಿಯನ್ನು ಕೆತ್ತಲಾಗಿದೆ. ನಂದಿಯ ಕತ್ತಿನ ಕೆಳಗೆ ಮನುಷ್ಯಾಕೃತಿಯ ಶಿಲ್ಪವಿದ್ದು, ಅದರ ಕೈಯಲ್ಲಿ ಹಣ್ಣಿನ ಬುಟ್ಟಿ ಕಾಣಬಹುದು. ಮನುಷ್ಯನೊಬ್ಬ ಹಣ್ಣುಗಳನ್ನು ನಂದಿಗೆ ತಿನಿಸುವ ಪರಿಕಲ್ಪನೆಯಲ್ಲಿ ಈ ಮೂರ್ತಿ ಇದ್ದು, ಇದು ಶಿಥಿಲಾವಸ್ಥೆ ತಲುಪಿದೆ. ಈ ಅಪರೂಪದ ಶಿಲ್ಪ ಇರುವುದು ಗುಜರಾತ್‌ನ ಅಹಮದಾಬಾದ್ ನಗರದಿಂದ 120 ಕಿ.ಮೀ. ದೂರದಲ್ಲಿರುವ ಮಾತೃಗಯಾದ ರುದ್ರಮಹಾದೇವ ದೇವಸ್ಥಾನದ ಆವರಣದಲ್ಲಿ.

–ಪ್ರಭಾ ಪ್ರಸಾದ್, ಬೆಂಗಳೂರು

## ಮೇಲ್ಛಾವಣಿಯಲ್ಲಿ ಸರ್ಪ!

ಬಹುತೇಕ ದೇವಸ್ಥಾನಗಳ ಗರ್ಭಗುಡಿ, ಅಂತರಾಳ ಹೊರತುಪಡಿಸಿ ನವರಂಗದ ಮೇಲ್ಛಾವಣಿಯಲ್ಲಿ ಅನೇಕ ರೀತಿಯ ಚಿತ್ತಾರದ ಸೂಕ್ಷ್ಮ ಕೆತ್ತನೆಗಳನ್ನು ಕಾಣುತ್ತೇವೆ. ಶಿಲ್ಪಿಯ ಕಲ್ಪನೆಯ ಕಲಾಚಾತುರ್ಯದ ಪ್ರತೀಕವಾಗಿ ಇವು ಮಾಡಿರುವುದು ಸಹಜ. ಇಂತಹ ದೇಗುಲಗಳ ಪೈಕಿ ಚೆನ್ನರಾಯಪಟ್ಟಣ ತಾಲ್ಲೂಕಿನ ಆನೆಕೆರೆಯ ಚೆನ್ನಕೇಶವ ದೇವಾಲಯವೂ ಒಂದು. ಈ ದೇಗುಲದ ಮೇಲ್ಛಾವಣಿಯಲ್ಲಿ ಹೂವಿನ ಮೊಗ್ಗಿಗೆ ಮೂರು ಹೆಡೆಯುಳ್ಳ ಸರ್ಪವೊಂದು ಸುತ್ತಿಕೊಂಡಿರುವಂತೆ ಕೆತ್ತಲಾಗಿದೆ. ಇದು ನೋಡುಗರನ್ನು ಆಕರ್ಷಿಸುತ್ತದೆ. 1119ರಲ್ಲಿ ಹೊಯ್ಸಳರ ಎರಡನೇ ವೀರ ಬಲ್ಲಾಳನಿಂದ ನಿರ್ಮಿತವಾದ ಈ ದೇಗುಲ ಹಿಂದೆ ಶಿಥಿಲಾವಸ್ಥೆ ತಲುಪಿತ್ತು. ಆದರೆ, ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರು 2000ನೇ ಇಸವಿಯಲ್ಲಿ ಜೀರ್ಣೋದ್ಧಾರ ಮಾಡಿದ್ದಾರೆ.

–ಕೆ.ಎನ್.ಪ್ರಭಾಕರ ಗುಪ್ತ, ಹಾಸನ



## ಬೈಲಹೊಂಗಲಕ್ಕೂ ಬಂತು ರೈಲು

ಬೈಲಹೊಂಗಲಕ್ಕೆ ರೈಲು ಬರಲಿ ಎಂಬುದು ಇಲ್ಲಿನ ಲಕ್ಷಾಂತರ ಮಂದಿಯ ಕನಸು. ಈ ಕನಸನ್ನು ನನಸಾಗಿಸುವ ನಿಟ್ಟಿನಲ್ಲಿ ಕಾರ್ಯ ಆಗಬೇಕಿದೆ. ಬೈಲಹೊಂಗಲದ ಮಾದರಿ ಕನ್ನಡ ಶಾಲೆಗೆ (ಸಂಖ್ಯೆ4) ರೈಲೊಂದನ್ನು ತಂದು ನಿಲ್ಲಿಸಲಾಗಿದೆ. ರೈಲಿನ ರೂಪದಲ್ಲಿ ಶಾಲೆಯ ಮುಂಭಾಗದ ಗೋಡೆಗಳಿಗೆ ಬಣ್ಣ ಬಳಿಸಿ ಸುಂದರಗೊಳಿಸಿದ್ದು, ಇದು ವಿದ್ಯಾರ್ಥಿಗಳಲ್ಲಿ ಉತ್ಸಾಹ ಮತ್ತು ಸಂತೋಷವನ್ನು ಇಮ್ಮಡಿಗೊಳಿಸಿದೆ. ವಿದ್ಯಾರ್ಥಿಗಳು ತಾವು ರೈಲಿನಲ್ಲಿ ಕುಳಿತು ಪಾಠ ಕೇಳುತ್ತಿದ್ದೇವೆ ಎಂಬ ಭಾವನೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ.

–ಮೀನಾಕ್ಷಿ ಕೆ. ರಾಮಗುಂಡಿ, ಬೈಲಹೊಂಗಲ

